Sri S. S. SHETTAR.—If some group of persons approach for acquisition, they are asked to get their Association registered under the Co-operative Societies Act. But, when they approach the registrar he says ; "first you get permission and then you will have the land." May I know whether they should get the permission first or approach for acquisition ?

Mr. SPEAKER.—It is out side the scope of the main question and hence the Supplementary is disallowed.

National Rural Water Supply Scheme

111. Sri JAYAPRAKASH SETTY (Brahmawara).—

Will the Minister for Development be pleased to state :—

(*a*) whether Government are in receipt of any proposals for providing piped water supply to Kalyanapura village, Udipi Taluk, under National Rural Water Supply Scheme ;

(*b*) when this scheme would be executed ?

A—Sri B. C. GOWDA (Deputy Minister for Development).—

(*a*) Yes.

(*b*) The scheme is being finalised by the Chief Engineer (Gl.).

ಶ್ರೀ ಎಸ್. ಜಯಪ್ರಕಾಶ ಶೆಟ್ಟಿ.—ಇದರ ಮಾಹಿತಿಗಳು ಸರ್ಕಾರಕ್ಕೆ ಯಾವಾಗ ಬಂದದ್ದು ?

†ಶ್ರೀ ಬಿ. ಎರ್. ಗೌಡ.—ಆ ವಿವರಗಳು ನಮ್ಮಲ್ಲಿಲ್ಲ.

ಶ್ರೀ ಎಸ್. ಜಯಪ್ರಕಾಶ ಶೆಟ್ಟಿ.—ಇದರ ಅಂದಾಜು ವೆಚ್ಚವೆಷ್ಟು ?

ಶ್ರೀ ಬಿ. ಎರ್. ಗೌಡ.—ಮೊದಲು ಅದು ಮೂರೂವರೆ ಲಕ್ಷಕ್ಕೆ ಅಂದಾಜಾಗಿತ್ತು. ಅದನ್ನು ಈಗ ಪುನರ್ವಿಮರ್ಶೆ ಮಾಡಿ ಕಳುಹಿಸಲು ಹಿಂದಕ್ಕೆ ಕಳುಹಿಸಲಾಗಿದೆ.

ಶ್ರೀ ಎಸ್. ಜಯಪ್ರಕಾಶ ಶೆಟ್ಟಿ.—ಇದರ ಅಂದಾಜಿನ ಶೇ. 10 ರಷ್ಟು ಕಾಂಟ್ರಿಬ್ಯೂಷನ್ ಅಂದರೆ ಅದು 35 ಸಾವಿರ ಆಗುತ್ತೆ. ಅದನ್ನು ಸರ್ಕಾರದವರು ವಹಿಸಿಕೊಳ್ಳುವುದಕ್ಕೆ ಸಾಧ್ಯ ವಿಲ್ಲವೇ ?

ಶ್ರೀ ಬಿ. ಎರ್. ಗೌಡ.—ಆಗುವುದಿಲ್ಲ. ಬೇಕಾದರೆ ಅದನ್ನು ಕಂತಿನ ಮೇಲೆ ಕೊಡುವುದಕ್ಕೆ ಅವಕಾಶ ಕೊಡುತ್ತೇವೆ. ಈ 10 ಪರ್ಸೆಂಟ್ ಪ್ಯಾಟರನ್ ಬದಲಾವಣೆ ಮಾಡುವುದಕ್ಕಾಗುವುದಿಲ್ಲ. ಈ ಒಟ್ಟು ವೆಚ್ಚದಲ್ಲಿ ಕೇಂದ್ರ ಸರ್ಕಾರದವರು ಶೇ. 50ರಷ್ಟು ಖರ್ಚನ್ನು ಕೊಡುತ್ತಾರೆ ; ಇನ್ನುಳಿದ ವೆಚ್ಚದಲ್ಲಿ ಶೇ. 40 ರಷ್ಟನ್ನು ರಾಜ್ಯ ಸರ್ಕಾರ ವಹಿಸುತ್ತದೆ. ಇನ್ನುಳಿದ ಶೇ. 10 ರಷ್ಟನ್ನು ಸಂಬಂಧಪಟ್ಟ ಪಂಚಾಯಿತಿಗಳು ಕೊಡಲೇಬೇಕು.

ಶ್ರೀ ಎಚ್. ಬಿ. ಜ್ಯಾಲನಯ್ಯ.—ಆ 10 ಪರ್ಸೆಂಟ್ ಕಾಂಟ್ರಿಬ್ಯೂಷನ್ ಮೊಬಲಗನ್ನು ಸರ್ಕಾರ ಸಾಲದ ರೂಪದಲ್ಲಿ ಏಕೆ ಕೊಡಬಾರದು ?

ಶ್ರೀ ಬಿ. ಎರ್. ಗೌಡ.—ಸಾಲಕ್ಕಿಂತ ಅವರು ಅದನ್ನು ಕಂತು ರೂಪದಲ್ಲಿ ಪಾವತಿ ಮಾಡುವುದಲ್ಲ.

ಶ್ರೀ ಎಸ್. ಎಚ್. ತಮ್ಮಯ್ಯ.—ಇಲ್ಲಿಯವರೆಗೂ ಕೆಲವು ಬಾವಿಗಳಿಗೆ ಕುಡಿಯುವ ನೀರನ್ನು ಒದಗಿಸತಕ್ಕ ಬಗ್ಗೆ ಹಣ ಮಂಜೂರಾಗಿದ್ದು ಕೆಲಸ ನಡೆದು ಆ ಕೆಲಸ ಪೂರ್ತಿಯಾಗುವುದಕ್ಕೆ ಹಣ ಸಾಲದೆ ಆ ಕೆಲಸಗಳು ಅರ್ಧಂಬರ್ಧ ಹಾಗೇ ನಿಂತಿವೆ. ಅಂಥ ಬಾವಿಗಳ ಕೆಲಸಕ್ಕಾದರೂ ಹಣವನ್ನು ಒದಗಿಸುತ್ತೀರಾ ?

ಶ್ರೀ ಬಿ. ಎರ್. ಗೌಡ.—ಅಂಥ ನಿರ್ದಿಷ್ಟ ನಿದರ್ಶನಗಳನ್ನು ಸರ್ಕಾರದ ಗಮನಕ್ಕೆ ತಂದರೆ ಆರೋಚನೆ ಮಾಡಲಾಗುತ್ತದೆ.

Dharmashalas at Hubli.

112. Sri S. R. BOMMAI (Kondgol).—

Will the Minister for Labour be pleased to state:—

(*a*) the number of Dharmashals in Hubli City;

(*b*) whether Government are aware that all Dharmasalas have been handed over to the different institutions by the then Administrator of Hubli Municipality and as such Hubli City has no buildings to provide for accommodation and rest for visitors;

(*c*) whether Government intend to take back the building previously handed over to the institution and issue a direction to the Hubli-Dharwar Corporation in this regard ?

A.—Sri K. PUTTASWAMY (Minister for Labour).—

(*a*) Nil.

(*b*) There was one Dharmashala owned by the erstwhile Hubli Municipality. The building is used for housing the Ayurvedic Dispensary which is run by the Corporation.

(*c*) Does not arise.

ಶ್ರೀ ಎಸ್. ಆರ್. ಬೊಮ್ಮಾಯಿ.—ಹುಬ್ಬಳ್ಳಿ ನಗರಕ್ಕೆ ಬರತಕ್ಕ ಬಡ ಪ್ರವಾಸಿಗರಿಗೆ ಮತ್ತು ಯಾತ್ರಿಕರಿಗೆ ಉಳಿದುಕೊಳ್ಳಲು ಜಾಗ ಇಲ್ಲ, ಇದು ಮೊದಲಿಗೆ ಸರ್ಕಾರದ ಬಿಲ್ಡಿಂಗು, ಮುನಿಸಿಪಾಲಿಟಿಯವರಿಗೆ ಕೊಟ್ಟಿದ್ದರು. ಪುನಃ ಜನರು ಉಪಯೋಗಿಸಿಕೊಳ್ಳಲಿಕ್ಕೆ ಈ ಜಾಗವನ್ನು ಕೊಡಲು ಏಕೆ ವಿಚಾರ ಮಾಡಬಾರದು ?

ಶ್ರೀ ಕೆ. ಪುಟ್ಟಸ್ವಾಮಿ.—ಹುಬ್ಬಳ್ಳಿಯಲ್ಲಿ ಮೊದಲು ಒಂದು ಧರ್ಮಶಾಲೆ ಇತ್ತು, ಅದು ಉಪಯೋಗವಾಗುತ್ತಾ ಇರಲಿಲ್ಲ. ಈಗ ಅದನ್ನು ಬೇರೆ ಇಲಾಖೆಗೆ ಕೊಟ್ಟಿದ್ದಾರೆ, ಅಲ್ಲಿ ಇನ್ನೂ ಎರಡು ರೆಸ್ಟ್ ಹೌಸಸ್ ಇವೆ. ಅವನ್ನೂ ಕೂಡ ಇ.ಎಸ್.ಐ. ಡಿಸ್ಪೆನ್ಸರಿ, ಹಾರ್ಟಿಕಲ್ಚರ್ ಆಫೀಸಿಗೆ ಕೊಟ್ಟಿದ್ದಾರೆ. ಇದು ಕಾರ್ಪೊರೇಷನ್‌ನ ಅಬ್ಲಿಗೇಟರಿ ಡ್ಯೂಟಿ ಅಲ್ಲ, ನಾವು ಡೈರೆಕ್ಷನ್ ಕೊಡುವುದಕ್ಕೆ ಆಗುವುದಿಲ್ಲ.

ಶ್ರೀ ಕೆ. ಎಚ್. ಪಾಟೀಲ್.—ಈ ಧರ್ಮಶಾಲೆ ನಡಾವಳಿ ತುಂಬಿರುತ್ತಿತ್ತು. ನಿಮ್ಮ ಅಧಿಕಾರಿಗಳು ಮಾಡಿರುವ ವರದಿಯಲ್ಲೂ ಕೂಡ ಧರ್ಮಶಾಲೆಯ ಅವಶ್ಯಕತೆ ಹುಬ್ಬಳ್ಳಿ ನಗರದಲ್ಲಿ ಇದೆ ಎಂದು ತಿಳಿಸಿದ್ದಾರೆ. ಆದ್ದರಿಂದ ಈ ಬಗ್ಗೆ ಜಾಗ್ರತೆ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಕೆ. ಪುಟ್ಟಸ್ವಾಮಿ.—ಯಾವುದೇ ಮಾಡಬೇಕಾದರೂ ಕಾನೂನು ಪ್ರಕಾರ ಮಾಡಬೇಕು. ಬಾಂಬೆ ಪ್ರೊವಿನ್ಷಿಯಲ್ ಕಾರ್ಪೊರೇಷನ್ ಆಕ್ಟ್ ಪ್ರಕಾರ ಧರ್ಮ ಶಾಲೆ ನಡೆಸುವುದು ಮುನಿಸಿಪಲ್ ಕಾರ್ಪೊರೇಷನ್‌ನ ಕರ್ತವ್ಯವಲ್ಲ. ಮೈಸೂರು ರಾಜ್ಯದಲ್ಲಿರತಕ್ಕ ಯಾವ ಮುನಿಸಿಪಾಲಿಟಿಗಳೂ